# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 773

ಸದಸ್ಯರ ಹೆಸರು : ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 21.02.2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ರೂಪಿಸಿರುವ ವೃಂದ ಮತ್ತು ನೇಮಕಾತಿಯ ನಿಯಮಾವಳಿಗಳನ್ವಯ ವಿವರ ನೀಡುವುದು; ಇಲ್ಲಿಯವರೆಗೆ ಅನುಕಂಪ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡಿರುವ ಮತ್ತು ಅರ್ಜಿ ಸಲ್ಲಿಸಿ ಇನ್ನೂ ನೇಮಕಾತಿ ಆಗದಿರುವ ವಿವರಗಳನ್ನು ನೀಡುವುದು; | ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ದಿನಾಂಕ:15.08.1997ರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ ಬೇರ್ಪಟ್ಟು ಸ್ವತಂತ್ರ ಸಂಸ್ಥೆಯಾಗಿರುತ್ತದೆ.<br><br>ಅನುಕಂಪ ಆಧಾರದ ನೇಮಕಾತಿಗಾಗಿ ಸಂಸ್ಥೆಯು ಸುತ್ತೋಲೆ ಸಂಖ್ಯೆ-839 ದಿನಾಂಕ:9.10.1991ರಂತೆ ನೀತಿಯನ್ನು ಹೊಂದಿರುತ್ತದೆ ಹಾಗೂ ದಿನಾಂಕ:4.12.2018ರಿಂದ ಜಾರಿಗೆ ಬರುವಂತೆ, ಸರ್ಕಾರದಲ್ಲಿರುವ ನಿಯಮಗಳ ಮಾದರಿಯಲ್ಲಿ ಅಗತ್ಯ ಬದಲಾವಣೆಗಳೊಂದಿಗೆ ಅನುಕಂಪದ ಆಧಾರದ ನೇಮಕಾತಿ ನೀತಿ-2018ನ್ನು ರೂಪಿಸಲಾಗಿರುತ್ತದೆ.<br><br>ಸಂಸ್ಥೆಯು ಅಸ್ಥಿತ್ವಕ್ಕೆ ಬಂದ ನಂತರದಲ್ಲಿ ಇಲ್ಲಿಯವರೆಗೆ 1229 ಮೃತಾವಲಂಭಿತರಿಗೆ ಅವರ ವಿದ್ಯಾರ್ಹತೆ, ವರಿಷ್ಠತೆ ಹಾಗೂ ಖಾಲಿ ಹುದ್ದೆಗಳ ಲಭ್ಯತೆಗನುಗುಣವಾಗಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.<br><br>ಪ್ರಸ್ತುತ 938 ಪ್ರಕರಣಗಳು ಅನುಕಂಪದ ಆಧಾರದ ನೇಮಕಾತಿಗೆ ಬಾಕಿ ಇದ್ದು, ನಿಯಮಾನುಸಾರ ವಿದ್ಯಾರ್ಹತೆ, ವರಿಷ್ಠತೆ ಹಾಗೂ ಖಾಲಿ ಹುದ್ದೆಗಳ ಲಭ್ಯತೆಗನುಗುಣವಾಗಿ ನೇಮಕ ಮಾಡಿಕೊಳ್ಳಲು ಕ್ರಮ ಜರುಗಿಸಲಾಗುತ್ತಿದೆ. |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಆ</td><td>ಡಿಪ್ಲೊಮಾ ಕೋರ್ಸ್‌ನ್ನು ಮಾಡಿರುವ ಅಭ್ಯರ್ಥಿಗಳು ಅನುಕಂಪ ಆಧಾರದ ಮೇಲೆ ನೌಕರಿ ಪಡೆಯಲು ಅರ್ಜಿ ಸಲ್ಲಿಸಿದ್ದಾರೆಯೇ; ಅವರಿಗೆ ನೇಮಕಾತಿ ಆದೇಶ ನೀಡಲಾಗಿದೆಯೇ; ಒಂದು ವೇಳೆ ನೇಮಕಾತಿ ಮಾಡಿಕೊಳ್ಳದಿರಲು ಸ್ಪಷ್ಟ ಕಾರಣಗಳೇನು;</td><td rowspan="2">ಡಿಪ್ಲೊಮಾ ಕೋರ್ಸ್ ಮಾಡಿರುವ ಮೃತಾವಲಂಬಿತರು ಅನುಕಂಪದ ಆಧಾರದ ಮೇಲೆ ನೌಕರಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಅವರುಗಳಿಗೆ ಇದುವರೆಗೆ ನೇಮಕಾತಿ ಆದೇಶ ನೀಡಲಾಗಿಲ್ಲ.<br><br>ಸಂಸ್ಥೆಯಲ್ಲಿ ಈ ಕೆಳಕಂಡ ದರ್ಜೆ-3 ಮೇಲ್ವಿಚಾರಕೇತರ (ಗ್ರೂಪ್-ಸಿ) & ದರ್ಜೆ-4 (ಗ್ರೂಪ್-ಡಿ) ಹುದ್ದೆಗಳಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ;<br><br>
<table>
<tr><th>ದರ್ಜೆ</th><th>ಪದನಾಮ</th><th>ಪದವೃಂದ & ನೇಮಕಾತಿ ನಿಯಮಾವಳಿಯಲ್ಲಿ ನಿಗಧಿಪಡಿಸಿರುವ ವಿದ್ಯಾರ್ಹತೆ</th></tr>
<tr><td>ದರ್ಜೆ-3</td><td>ಕಿರಿಯ ಸಹಾಯಕ ಕಂ ಡೇ.ಎ.ಆ</td><td>1.ಪಿ.ಯು.ಸಿ (ಆರ್ಟ್ಸ್/ ಸೈನ್ಸ್/ ಕಾಮರ್ಸ್) ಅಥವಾ 10+2 ಐ.ಸಿ.ಎಸ್.ಸಿ/ ಸಿ.ಬಿ.ಎಸ್.ಸಿ (ಮುಕ್ತ ಶಾಲೆ ಅಥವಾ ಮುಕ್ತ ವಿಶ್ವವಿದ್ಯಾಲಯದಿಂದ ಪಡೆದ ಪಿ.ಯು.ಸಿ/10+2 ತರಗತಿ/ ಜೆ.ಓ.ಸಿ./ ಜೆ.ಎಲ್.ಸಿ. ಮತ್ತು ಡಿಪ್ಲೋಮ ಹೊರತುಪಡಿಸಿ) ಹಾಗೂ,<br><br>2. 6 ತಿಂಗಳ ಕಂಪ್ಯೂಟರ್ ಕೋರ್ಸ್ ಪ್ರಮಾಣ ಪತ್ರ ಹಾಗೂ ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಬೆರಳಚ್ಚು ಜ್ಞಾನ ಹೊಂದಿರತಕ್ಕದ್ದು. 6 ತಿಂಗಳ ಕಂಪ್ಯೂಟರ್ ಕೋರ್ಸ್ ಪ್ರಮಾಣ ಪತ್ರ ಹಾಗೂ ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಬೆರಳಚ್ಚು ಜ್ಞಾನ ಹೊಂದಿರತಕ್ಕದ್ದು.</td></tr>
</table>
<br>
<table>
<tr><th>ದರ್ಜೆ</th><th>ಪದನಾಮ</th><th>ಪದವೃಂದ & ನೇಮಕಾತಿ ನಿಯಮಾವಳಿಯಲ್ಲಿ ನಿಗಧಿಪಡಿಸಿರುವ ವಿದ್ಯಾರ್ಹತೆ</th></tr>
<tr><td rowspan="3">ದರ್ಜೆ-3</td><td>ನಿರ್ವಾಹಕ</td><td>ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆ ಅಥವಾ ಜೆ.ಒ.ಸಿ ಕೋರ್ಸ್‌ನಲ್ಲಿ ಉತ್ತೀರ್ಣ</td></tr>
<tr><td>ತಾಂತ್ರಿಕ ಸಹಾಯಕ</td><td>ಎಸ್.ಎಸ್.ಎಲ್.ಸಿ ಉತ್ತೀರ್ಣ ನಂತರ ಐ.ಟಿ.ಐ/ ಐ.ಟಿ.ಸಿ/ ಎನ್.ಎ.ಸಿ ನಲ್ಲಿ ಉತ್ತೀರ್ಣರಾಗಿರಬೇಕು.</td></tr>
<tr><td>ಕರಾಸಾ ಪೇದೆ</td><td>ಪಿ.ಯು.ಸಿ ಉತ್ತೀರ್ಣ ಅಥವಾ ದ್ವಿತೀಯ ದರ್ಜೆ ಸೈನಿಕ ಪ್ರಮಾಣ</td></tr>
</table>
</td></tr>
<tr><td>ಇ.</td><td>ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು 2015ರಲ್ಲಿ ಡಿಪ್ಲೊಮಾ ಕೋರ್ಸ್‌ನ್ನು ಪದವಿಪೂರ್ವ ಶಿಕ್ಷಣಕ್ಕೆ (ಪಿಯುಸಿ) ತತ್ಸಮಾನವೆಂದು ನೇಮಕಾತಿಗೆ ಪರಿಗಣಿಸಬಹುದಾಗಿದೆ ಹಾಗೂ ಅನುಕಂಪ ಆಧಾರದ ನೇಮಕಾತಿಗೂ ಈ ಆದೇಶ ಅನ್ವಯಿಸುತ್ತದೆಯೆಂದು ಸೂಚಿಸಿದ್ದು, ಅದರಂತೆ ಈ ನಿಯಮವು ಸದರಿ ಸಂಸ್ಥೆಯಲ್ಲಿ ಯಾವ ಸಮಯದಿಂದ ಜಾರಿಗೆ ಬಂದಿರುತ್ತದೆ; ಒಂದು ವೇಳೆ ಜಾರಿ ಮಾಡದಿದ್ದಲ್ಲಿ, ವಿಳಂಬವಾಗಿದ್ದರೆ ಸ್ಪಷ್ಟ ಕಾರಣಗಳನ್ನು ತಿಳಿಸುವುದು;</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

| | | |
|---|---|---|
| | | ಪತ್ರ ಹೊಂದಿರುವ ಮಾಜಿ-ಸೈನಿಕರು. |
| | 1. ಚಾಲಕ<br>2. ಚಾಲಕ ಕಂ ನಿರ್ವಾಹಕ, | ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಉತ್ತೀರ್ಣ. |
| ದರ್ಜೆ-4 | ಸಹಾಯಕ (ಕಛೇರಿ) ಮತ್ತು ಸಹಾಯಕ (ಸ್ವಚ್ಛತೆ) | 7ನೇ ತರಗತಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಉತ್ತೀರ್ಣ. |

ಈ ಮೇಲ್ಕಂಡ ಯಾವುದೇ ಹುದ್ದೆಗಳಿಗೆ ಸಂಸ್ಥೆಯ ಪದವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಡಿಪ್ಲೋಮ ವಿದ್ಯಾರ್ಹತೆಯನ್ನು ನಿಗಧಿಪಡಿಸಿರುವುದಿಲ್ಲ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಸುತ್ತೋಲೆ ಸಂ:1715 ದಿನಾಂಕ:20.6.2023ರನ್ವಯ ಈ ಕೆಳಕಂಡ ಹುದ್ದೆಗಳಿಗೆ ಪದವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ವಿದ್ಯಾರ್ಹತೆಯನ್ನು ಮಾರ್ಪಡಿಸಿರುತ್ತದೆ.

| ದರ್ಜೆ | ಪದನಾಮ | **ಪದವೃಂದ & ನೇಮಕಾತಿ ನಿಯಮಾವಳಿಯಲ್ಲಿ ನಿಗಧಿಪಡಿಸಿರುವ ವಿದ್ಯಾರ್ಹತೆ** |
|---|---|---|
| ದರ್ಜೆ-3 | ಕಿರಿಯ ಸಹಾಯಕ ಕಂ ಡೇ.ಎ.ಆ | 1. ಪಿ.ಯು.ಸಿ (ಆರ್ಟ್ಸ್/ ಸೈನ್ಸ್ /ಕಾಮರ್ಸ್) ಅಥವಾ 10+2 ಐ.ಸಿ.ಎಸ್.ಸಿ/ ಸಿ.ಬಿ.ಎಸ್.ಸಿ ಅಥವಾ 3 ವರ್ಷದ ಡಿಪ್ಲೋಮಾ (ಮುಕ್ತ ಶಾಲೆ ಅಥವಾ ಮುಕ್ತ ವಿಶ್ವವಿದ್ಯಾಲಯದಿಂದ ಪಡೆದ ಪಿ.ಯು.ಸಿ/10+2 ತರಗತಿ/ಜೆ.ಓ.ಸಿ./ ಜೆ.ಎಲ್.ಸಿ.) ಹಾಗೂ,<br>2. 6 ತಿಂಗಳ ಕಂಪ್ಯೂಟರ್ ಕೋರ್ಸ್ ಪ್ರಮಾಣ ಪತ್ರ ಹಾಗೂ ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಬೆರಳಚ್ಚು ಜ್ಞಾನ ಹೊಂದಿರತಕ್ಕದ್ದು. |

| ಕ್ರ.<br>ಸಂ. | ಪ್ರಶ್ನೆ | ಉತ್ತರ |
|---|---|---|
| | | ನಿರ್ವಾಹಕ: ಪಿ.ಯು.ಸಿ (ಆರ್ಟ್ಸ್/ಸೈನ್ಸ್/ಕಾಮರ್ಸ್) ಅಥವಾ 10+2 ಐ.ಸಿ.ಎಸ್.ಸಿ/ ಸಿ.ಬಿ.ಎಸ್.ಸಿ ಅಥವಾ 3 ವರ್ಷದ ಡಿಪ್ಲೋಮಾ (ಮುಕ್ತ ಶಾಲೆ ಅಥವಾ ಮುಕ್ತ ವಿಶ್ವವಿದ್ಯಾಲಯದಿಂದ ಪಡೆದ ಪಿ.ಯು.ಸಿ/10+2 ತರಗತಿ/ ಜೆ.ಓ.ಸಿ./ ಜೆ.ಎಲ್.ಸಿ.)<br><br>ಕರಾಸಾ ಪೇದೆ: ಪಿ.ಯು.ಸಿ (ಆರ್ಟ್ಸ್/ಸೈನ್ಸ್/ಕಾಮರ್ಸ್) ಅಥವಾ 10+2 ಐ.ಸಿ.ಎಸ್.ಸಿ/ ಸಿ.ಬಿ.ಎಸ್.ಸಿ ಅಥವಾ 3 ವರ್ಷದ ಡಿಪ್ಲೋಮಾ (ಮುಕ್ತ ಶಾಲೆ ಅಥವಾ ಮುಕ್ತ ವಿಶ್ವವಿದ್ಯಾಲಯದಿಂದ ಪಡೆದ ಪಿ.ಯು.ಸಿ/10+2 ತರಗತಿ/ ಜೆ.ಓ.ಸಿ./ ಜೆ.ಎಲ್.ಸಿ.) ಅಥವಾ ದ್ವಿತೀಯ ದರ್ಜೆ ಸೈನಿಕ ಪ್ರಮಾಣ ಪತ್ರ ಹೊಂದಿರುವ ಮಾಜಿ-ಸೈನಿಕರು.<br><br>ಈ ಹಿನ್ನೆಲೆಯಲ್ಲಿ 3 ವರ್ಷಗಳ ಡಿಪ್ಲೊಮಾ ವಿದ್ಯಾರ್ಹತೆಯನ್ನು ಹೊಂದಿರುವ ಮೃತರ ವಲಂಬಿತರಿಗೆ ಕಿರಿಯ ಸಹಾಯಕ ಕಂ ಡೇಟಾ ಎಂಟ್ರಿ ಆಪರೇಟರ್, ನಿರ್ವಾಹಕ ಮತ್ತು ಕರಾಸಾ ಪೇದೆ ಹುದ್ದೆಗಳಲ್ಲಿ ನೌಕರಿ ನೀಡಲು ಪರಿಶೀಲಿಸುವ ಕ್ರಮ ಪ್ರಗತಿಯಲ್ಲಿದೆ. |
| ಈ. | ಅನುಕಂಪ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ಸಂಸ್ಥೆಯ ಸಿಬ್ಬಂದಿ ಮರಣ ಹೊಂದಿದ ಸಮಯದಲ್ಲಿ ಸಂಸ್ಥೆಯಲ್ಲಿ ಜಾರಿಯಲ್ಲಿರುವ ಎಲ್ಲಾ ನಿಯಮಾವಳಿಗಳು ಈ ನೇಮಕಾತಿಗೆ ಅನ್ವಯಿಸುತ್ತವೆಯೋ ಅಥವಾ ನೇಮಕಾತಿ ಆದೇಶ ನೀಡುವ ಸಮಯದಲ್ಲಿರುವ ಪ್ರಸ್ತುತ ಆದೇಶಗಳು ಮತ್ತು ಜಾರಿಯಲ್ಲಿರುವ ನಿಯಮಾವಳಿಗಳು ಅನ್ವಯಿಸುತ್ತವೆಯೋ; (ಸಂಪೂರ್ಣ ಮಾಹಿತಿ ನೀಡುವುದು) | ವಿದ್ಯಾರ್ಹತೆಯು ಕಾಲಕಾಲಕ್ಕೆ ಬದಲಾಗುವ ಸಾಧ್ಯತೆಗಳಿರುವುದರಿಂದ ವಿದ್ಯಾರ್ಹತೆಯನ್ನು ಹೊರತುಪಡಿಸಿ ಉಳಿದಂತೆ ಸಿಬ್ಬಂದಿಯು ಮರಣ ಹೊಂದಿದ ಸಮಯದಲ್ಲಿ ಚಾಲ್ತಿಯಲ್ಲಿರುವ ನಿಯಮಗಳು ಅನ್ವಯಿಸುತ್ತವೆ. |

ಸಂಖ್ಯೆ: ಟಿಡಿ 57 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು